**ದಿನಾಂಕಃ 18-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

ಈ ಪ್ರಕರಣದಲ್ಲಿ ನಾನು ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈಗ ನಾನು ನಿಪಿ-1 ನ್ನು ನೋಡುತ್ತಿದ್ದು ಅದು ನಾನು ಹೇಳುವ ಟಿ.ಎನ್. ರಾಮಕೃಷ್ಣನ್ ರವರ ವಿಲ್‌ನಾಮೆ ಆಗಿರುತ್ತದೆ. ಅದನ್ನು ಅವರೇ ತಮ್ಮ ಕೈಬರಹದಲ್ಲಿ ಬರೆದು ನನ್ನ ಹಾಗೂ ಇನ್ನೊಬ್ಬ ಸಾಕ್ಷಿದಾರರಾದ ಅನಿಲ್ ಕುಲಕರ್ಣಿ ರವರ ಸಮಕ್ಷಮ ಸಹಿ ಮಾಡಿರುತ್ತಾರೆ ಮತ್ತು ನಾವು ಸಹ ಅವರ ಸಮಕ್ಷಮ ಸಹಿ ಮಾಡಿರುತ್ತೇವೆ. ಅದರಲ್ಲಿರುವ ಟಿ.ಎನ್ ರಾಮಕೃಷ್ಣನ್ ರವರ ಸಹಿಯನ್ನು ನಿಪಿ-1(ಎ) ಎಂದು, ನನ್ನ ಸಹಿಯನ್ನು ನಿಪಿ-1(ಬಿ) ಎಂದು ಮತ್ತು ಅನಿಲ್ ಕುಲಕರ್ಣಿ ಇವರ ಸಹಿಯನ್ನು ನಿಪಿ-1(ಸಿ) ಎಂದು ಗುರ್ತಿಸಲಾಯಿತು. ಆ ಸಮಯದಲ್ಲಿ ಟಿ.ಎನ್ ರಾಮಕೃಷ್ಣನ್ ರವರ ಆರೋಗ್ಯ ಚೆನ್ನಾಗಿತ್ತು.

**ಎದುರುದಾರರು ಯಾರು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಜೆ.ಆರ್.ಮೆಂಡೋನ್ಸಾ)**
**(ಪ್ರಭಾರ) 5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**